[2019] 6 ಎಸ್. ಸಿ. ಆರ್. 938

ಕಮೀಷನರ್ ಆಫ್ ಸೆಂಟ್ರಲ್ ಎಕ್ಸೈಸ್ ಮತ್ತು ಕಸ್ಟಮ್ಸ್ ಬೆಂಗಳೂರು

ವಿರುದ್ಧ

ಮೆಸರ್ಸ್ ಜೆಎಸ್ಡಬ್ಲ್ಯೂ ಸ್ಟೀಲ್ (ಲಿಮಿಟೆಡ್)

ಹಿಂದೆ (ಜಿಂದಾಲ್ ವಿಜಯನಗರ ಸ್ಟೀಲ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು.)

(ಸಿವಿಲ್ ಮೇಲ್ಮನವಿ ಸಂಖ್ಯೆ: 531/2008)

ಏಪ್ರಿಲ್ 09,2019

[ಎಸ್. ಎ. ಬೋಬ್ಡೆ, ದೀಪಾಕ್ ಗುಪ್ತಾ ಮತ್ತು ವಿನೀತ್ ಶರಣ್, ನ್ಯಾಯಮೂರ್ತಿಗಳು.]

ಕೇಂದ್ರೀಯ ಅಬಕಾರಿ ಕಾಯ್ದೆ, 1944 - ಕಲಂಗಳು 4 ಮತ್ತು 11ಎಬಿ – 1985ರ ಕಾಯ್ದೆಯ ಅಧ್ಯಾಯ 72ರ ಅಡಿಯಲ್ಲಿ ಬರುವಂತಹ ಪಿಗ್ ಐರನ್ ಮತ್ತು ಎಚ್ಆರ್ ಕಾಯಿಲ್ ಶೀಟ್ ಗಳನ್ನು ಎದುರುದಾರ ಉತ್ಪಾದಿಸಿದ್ದು - ಸರಕುಗಳನ್ನು ಮಾರಾಟ ಮಾಡುವಾಗ, ಸರಕುಗಳ ಬೆಲೆಯ ಮತ್ತು ಗ್ರಾಹಕರಿಂದ 'ಧರ್ಮದಾ' ಎಂಬ ದತ್ತಿ ದಾನವನ್ನು ಸೇರಿಸಿ ಇನ್ವಾಯ್ಸ್ಗಳನ್ನು ತಯಾರಿಸಿದ್ದು ಧರ್ಮದಾವನ್ನು ಚಾರಿಟಿಗೆ ಜಮಾ ಮಾಡಲಾಯಿತು – 2002ರ ನಿಯಮಗಳ ನಿಯಮ 25ರಡಿ ದಂಡವನ್ನು ಮತ್ತು 1944 ರ ಕಾಯ್ದೆಯ ಕಲಂ 11 ಎಬಿ ರಡಿ ಬಡ್ಡಿಯನ್ನು ಏಕೆ ವಿಧಿಸಬಾರದೆಂದು ಕಾರಣ ಕೇಳಿ ನೋಟಿಸ್ ಅನ್ನು ಕೇಂದ್ರ ಅಬಕಾರಿ ಮತ್ತು ಕಸ್ಟಮ್ಸ್ ನ ಬಳ್ಳಾರಿ ಜಿಲ್ಲಾಧಿಕಾರಿಗಳು ಎದುರುದಾರನಿಗೆ ನೀಡಿದ್ದು - ಕೇಂದ್ರ ಅಬಕಾರಿ ಸುಂಕದ ಪಾವತಿಗೆ ನಿಗದಿಪಡಿಸಬಹುದಾದ ಮೌಲ್ಯಕ್ಕೆ ಧರ್ಮದಾ ವನ್ನು ಸೇರಿಸಬೇಕು ಎಂದು ಆಯುಕ್ತರು ತೀರ್ಮಾನಿಸಿದ್ದು - ಆಯುಕ್ತರು (ಮೇಲ್ಮನವಿಗಳು) ರವರು ಆದೇಶವನ್ನು ಪುರಸ್ಕರಿಸಿದ್ದು – ಸಿ.ಇ.ಎಸ್.ಟಿ.ಎ.ಟಿ ರವರು ಆದೇಶವನ್ನು ರದ್ದುಪಡಿಸಿದ್ದು – ಅದರ ವಿರುದ್ಧ ಮೇಲ್ಮನವಿಯಲ್ಲಿ ಈ ರೀತಿ ತೀರ್ಮಾನಿಸಲಾಗಿದೆ: ಈ ಪ್ರಕರಣವನ್ನು ಎಂ/ಎಸ್. ಡಿ. ಜೆ. ಮಲ್ಪಾನಿ ವಿರುದ್ಧ ಕಮೀಷನರ್ ಆಫ್ ಸೆಂಟ್ರಲ್ ಎಕ್ಸೈಸ್, ನಾಸಿಕ್ [2019] 6 ಎಸ್. ಸಿ. ಆರ್ 925ರ ಜೊತೆ ಟ್ಯಾಗ್ ಮಾಡಲಾಗಿದೆ ಹಾಗೂ ಅದರಲ್ಲಿ ತೀರ್ಮಾನಿಸಿರುವುದೇನೆಂದರೆ ಧರ್ಮದಾ ಮೊತ್ತವನ್ನು ಮೌಲ್ಯಮಾಪನದ ಉದ್ದೇಶಗಳಿಗಾಗಿ ವಹಿವಾಟಿನ ಮೌಲ್ಯದಲ್ಲಿ ಸೇರಿಸಲಾಗುವುದಿಲ್ಲ- ಆ ತೀರ್ಪನ್ನು ಗಮನದಲ್ಲಿಟ್ಟುಕೊಂಡು, ಪ್ರಸ್ತುತ ಮೇಲ್ಮನವಿಯನ್ನು ವಜಾ ಮಾಡಲಾಗಿದೆ - ಕೇಂದ್ರ ಅಬಕಾರಿ ನಿಯಮಗಳು, 2002 - ನಿಯಮ 25 - ಕೇಂದ್ರ ಅಬಕಾರಿ ಸುಂಕ ಕಾಯ್ದೆ 1985 - ಅಧ್ಯಾಯ 72.

ಅರ್ಜಿಯನ್ನು ವಜಾಗೊಳಿಸಿದ ನ್ಯಾಯಾಲಯ

ತೀರ್ಮಾನಿಸಿರುವುದು: ಪ್ರಸ್ತುತ ಪ್ರಕರಣವನ್ನು ಇದೇ ನ್ಯಾಯಪೀಠವು ದಿನಾಂಕ 29.07.2015 ರ ಆದೇಶದಲ್ಲಿ ಉಲ್ಲೇಖಿಸಿದ ಮೆಸರ್ಸ್. ಡಿ. ಜೆ. ಮಲ್ಪಾನಿ ವಿರುದ್ಧ ಕಮೀಷನರ್ ಆಫ್ ಸೆಂಟ್ರಲ್ ಎಕ್ಸೈಸ್, ನಾಸಿಕ್ ಪ್ರಕರಣದ ಜೊತೆ ಜೋಡಿಸಲಾಗಿದೆ. ಮೌಲ್ಯಮಾಪನದ ಉದ್ದೇಶಗಳಿಗಾಗಿ ವಹಿವಾಟಿನ ಮೌಲ್ಯದಲ್ಲಿ ಧರ್ಮದಾ ಮೊತ್ತವನ್ನು ಸೇರಿಸಲಾಗುವುದಿಲ್ಲ ಎಂದು ಅದರಲ್ಲಿ ನಿರ್ಣಯಿಸಲಾಗಿದೆ. ಮೆಸರ್ಸ್. ಡಿ. ಜೆ. ಮಲ್ಪಾನಿ ವಿರುದ್ಧ ಕಮೀಷನರ್ ಆಫ್ ಸೆಂಟ್ರಲ್ ಎಕ್ಸೈಸ್, ನಾಸಿಕ್ ಸಿವಿಲ್ ಮೇಲ್ಮನವಿ ಸಂಖ್ಯೆ 5282/ 2005ರ ತೀರ್ಪನ್ನು ದೃಷ್ಟಿಯಲ್ಲಿಟ್ಟುಕೊಂಡು, ಪ್ರಸ್ತುತ ಮೇಲ್ಮನವಿಯನ್ನು ವಜಾಗೊಳಿಸಲಾಗಿದೆ. [ಕಂಡಿಕೆ 5, 6] [940-ಡಿ-ಇ]

ಮೆಸರ್ಸ್. ಡಿ. ಜೆ. ಮಲ್ಪಾನಿ ವಿರುದ್ಧ ಕೇಂದ್ರ ಅಬಕಾರಿ ಆಯುಕ್ತರು, ನಾಸಿಕ್ [2019] 6 ಎಸ್. ಸಿ. ಆರ್. 925 - ಅನ್ನು ಅವಲಂಬಿಸಿದ್ದಾರೆ.

ಕಲೆಕ್ಟರ್ ವಿರುದ್ಧ ಪಂಚಮುಖಿ ಎಂಜಿನಿಯರಿಂಗ್ ವರ್ಕ್ಸ್ (2003) (158) ಇ.ಎಲ್.ಟಿ. 550 (ಎಸ್ ಸಿ)- ಬಗ್ಗೆ ಉಲ್ಲೇಖಿಸಲಾಗಿದೆ.

ಕೇಸ್ ಲಾ ಉಲ್ಲೇಖ

[2019] 6 ಎಸ್. ಸಿ. ಆರ್. 925 ಖಂಡಿಕೆ 6 ಅನ್ನು ಅವಲಂಬಿಸಿದ್ದಾರೆ.

(2003) (158) ಇ. ಎಲ್. ಟಿ. 550 (ಎಸ್. ಸಿ.) ಖಂಡಿಕೆ 4ನ್ನು ಉಲ್ಲೇಖಿಸಲಾಗಿದೆ

ದಿವಾಣಿ ಮೇಲ್ಮನವಿ ಪ್ರಾಧಿಕಾರ: ದಿವಾಣಿ ಮೇಲ್ಮನವಿ ಸಂಖ್ಯೆ 531/2008.

ಕಸ್ಟಮ್ಸ್, ಅಬಕಾರಿ ಮತ್ತು ಸೇವೆ ತೆರಿಗೆ ಮೇಲ್ಮನವಿ ನ್ಯಾಯಮಂಡಳಿ, ದಕ್ಷಿಣ ವಲಯ ನ್ಯಾಯಪೀಠ, ಬೆಂಗಳೂರು ರವರು ಮೇಲ್ಮನವಿ ಸಂಖ್ಯೆ. ಇ/395/2005 ರಲ್ಲಿ ದಿನಾಂಕ 04.04.2007 ರ ತೀರ್ಪು ಮತ್ತು ಆದೇಶ ಸಂಖ್ಯೆ 440/2007 ನಿಂದ ಉದ್ಭವಿಸಿರುತ್ತೆ.

ಕೆ. ರಾಧಾಕೃಷ್ಣನ್, ಎಸ್. ಕೆ. ಬಗಾರಿಯಾ, ಹಿರಿಯ ನ್ಯಾಯವಾದಿಗಳು, ಅಲೋಕ್ ಯಾದವ್, ಕೆ. ಅಜಿತ್ ಸಿಂಗ್, ಪ್ರವೀಣ್ ಕುಮಾರ್, ಕುಮಾರಿ ನಿಶಾ ಬಾಗ್ಚಿ, ಕುಮಾರಿ ಅರುಣಾ ಗುಪ್ತಾ, ಬಿ ಕೃಷ್ಣ ಪ್ರಸಾದ್, ಯು. ಎ. ರಾಣಾ, ಹಿಮಾಂಶು ಮೆಹ್ತಾ, (ಮೆಸರ್ಸ್. ಗಾಗ್ರತ್ ಮತ್ತು ಕಂಪನಿ) ವಕೀಲರು ಪಕ್ಷಗಾರರ ಪರವಾಗಿ ಹಾಜರಾಗಿರುತ್ತಾರೆ.

ನ್ಯಾಯಾಲಯದ ತೀರ್ಪನ್ನು ನೀಡಿದವರು

ಎಸ್. ಎ. ಬೋಬ್ಡೆ, ನ್ಯಾಯಮೂರ್ತಿಗಳು:

1. ಕೇಂದ್ರ ಅಬಕಾರಿ ಮತ್ತು ಸೇವೆ ತೆರಿಗೆ ಮೇಲ್ಮನವಿ ನ್ಯಾಯಮಂಡಳಿ (ಸಂಕ್ಷಿಪ್ತವಾಗಿ "ಸಿ.ಇ.ಎಸ್.ಟಿ.ಎ.ಟಿ.") ಯ ದಿನಾಂಕ 04.04.2007 ರ ಆದೇಶದ ವಿರುದ್ಧ ಕಂದಾಯ - ಮೇಲ್ಮನವಿದಾರರು ಮೇಲ್ಮನವಿ ಸಲ್ಲಿಸಿದ್ದಾರೆ. ಎದುರುದಾರನು ಕೇಂದ್ರ ಅಬಕಾರಿ ಸುಂಕ ಕಾಯ್ದೆಯ, 1985ರ 72ನೇ ಅಧ್ಯಾಯದ ಅಡಿಯಲ್ಲಿ ಬರುವ ಸರಕುಗಳನ್ನು ತಯಾರಿಸಿದ್ದಾನೆ. ಎದುರುದಾರನು ಪಿಗ್ ಐರನ್ ಮತ್ತು ಎಚ್‌ಆರ್ ಕಾಯಿಲ್ ಶೀಟ್ಸ್‌ಗಳನ್ನು ತಯಾರಿಸಿದ್ದಾನೆ. ಸರಕುಗಳನ್ನು ಮಾರಾಟ ಮಾಡುವಾಗ ಅವರು ಸರಕುಗಳ ಬೆಲೆಯ ಮೇಲೆ ಇನ್ವಾಯ್ಸ್‌ಗಳನ್ನು ಮುದ್ರಿಸಿದರು ಮತ್ತು ಗ್ರಾಹಕರಿಂದ 'ಧರ್ಮದಾ' ಎಂಬ ದತ್ತಿ ದೇಣಿಗೆಯನ್ನು ಸಂಗ್ರಹಿಸಿದರು. ಎದುರುದಾರನ ಪ್ರಕಾರ, ಧರ್ಮದಾ ವು ದಾನಕ್ಕಾಗಿ ಉದ್ದೇಶಿಸಲಾಗಿತ್ತು ಮತ್ತು ಅದಕ್ಕೆ ಅನುಗುಣವಾಗಿ ದಾನಕ್ಕೆ ಜಮೆ ಮಾಡಲಾಯಿತು.

2. ಆದಾಗ್ಯೂ, 19.03.2004 ರಂದು ಕೇಂದ್ರ ಅಬಕಾರಿ ಮತ್ತು ಕಸ್ಟಮ್ಸ್ ಉಪ ಆಯುಕ್ತರ ಕಛೇರಿಯಿಂದ ದಿನಾಂಕ 19.03.2004 ರಂದು ಷೋಕಾಸ್ ನೋಟಿಸ್ಸ್ ನ್ನು ನೀಡಿದ್ದು 2002 ರ ನಿಯಮಗಳ ನಿಯಮ 25 ರ ಅಡಿಯಲ್ಲಿ ದಂಡವನ್ನು ಮತ್ತು ಕೇಂದ್ರ ಅಬಕಾರಿ ಕಾಯ್ದೆ, 1944 ರ ಕಲಂ 11ಎಬಿ ಅಡಿಯಲ್ಲಿ ಬಡ್ಡಿಯನ್ನು ಏಕೆ ವಿಧಿಸಬಾರದು ಎಂಬುದಕ್ಕೆ ಕಾರಣ ತೋರಿಸುವಂತೆ ಎದುರುದಾರನಿಗೆ ಕರೆ ನೀಡಿರುತ್ತಾರೆ. ಎದುರುದಾರನ ವಾದವನ್ನು ಆಲಿಸಿದ ನಂತರ, ಉಪ ಆಯುಕ್ತರು 10.09.2004 ದಿನಾಂಕದ ಆದೇಶ ಮೂಲಕ ಕೇಂದ್ರ ಅಬಕಾರಿ ಸುಂಕದ ಪಾವತಿಗೆ ನಿಗದಿಪಡಿಸಬಹುದಾದ ಮೌಲ್ಯಕ್ಕೆ ಧರ್ಮದಾ ವನ್ನು ಸೇರಿಸಬೇಕು ಎಂದು ತೀರ್ಪು ನೀಡಿದರು.

3. ನಂತರ, ಎದುರುದಾರನು ಸಲ್ಲಿಸಿದ ಮೇಲ್ಮನವಿಯಲ್ಲಿ, ಆಯುಕ್ತರು (ಮೇಲ್ಮನವಿಗಳು) ರವರು ಮಾನ್ಯ ಜಿಲ್ಲಾಧಿಕಾರಿಗಳ ತೀರ್ಪನ್ನು ದೃಢಪಡಿಸಿದರು ಮತ್ತು ಮೇಲ್ಮನವಿಯನ್ನು ತಿರಸ್ಕರಿಸಿದರು ಮತ್ತು ಧರ್ಮದಾ ವನ್ನು ಮೌಲ್ಯಮಾಪನಕ್ಕೆ ಸೇರಿಸಬೇಕು ಎಂದು ತೀರ್ಪು ನೀಡಿದರು. ಆದ್ದರಿಂದ, ಸರಕುಗಳನ್ನು ಅವುಗಳ ಬೆಲೆ ಮತ್ತು ಧರ್ಮದಾ ಆಧಾರದ ಮೇಲೆ ಮೌಲ್ಯಮಾಪನ ಮಾಡಬೇಕಾಗಿತ್ತು.

ಎದುರುದಾರನು ಸಲ್ಲಿಸಿದ ಮೇಲ್ಮನವಿಯಲ್ಲಿ, ದಿನಾಂಕದ 04.04.2007 ತೀರ್ಪಿನ ಮೂಲಕ, ಸಿ.ಇ.ಎಸ್.ಟಿ.ಎ.ಟಿ. ಯು ಮೇಲ್ಮನವಿಯನ್ನು ಪುರಸ್ಕರಿಸಿತು ಮತ್ತು 29.03.2005 ರಂದು ಕಮಿಷನರ್

(ಮೇಲ್ಮನವಿಗಳು) ಮಾಡಿದ ಆದೇಶವನ್ನು ರದ್ದುಗೊಳಿಸಿತು. ಮೇಲ್ಮನವಿಯಲ್ಲಿ ಸುಪ್ರೀಂ ಕೋರ್ಟ್ ನಿಂದ ದೃಢೀಕರಿಸಲ್ಪಟ್ಟ ಮೋಹನ್ ಮತ್ತು ಕಂಪನಿ, ಮದ್ರಾಸ್ ವರ್ಸಸ್ ಸಿ. ಸಿ. ಇ. ಮದ್ರಾಸ್ ಪ್ರಕರಣವನ್ನು ಸಿ. ಇ. ಎಸ್. ಟಿ. ಎ. ಟಿ. ಯು ತನ್ನ ತೀರ್ಪಿನಲ್ಲಿ ಅನುಸರಿಸಲು ಉದ್ದೇಶಿಸಿತ್ತು ಹಾಗೂ ಇದರಲ್ಲಿ ಈ ನ್ಯಾಯಾಲಯವು ಧರ್ಮದಾ ವನ್ನು ಮೌಲ್ಯಮಾಪನ ಮಾಡಬಹುದಾದ ಮೌಲ್ಯದಲ್ಲಿ ಸೇರಿಸಲು ಬರುವುದಿಲ್ಲ ಎಂದು ತೀರ್ಪು ನೀಡಿತ್ತು.

4. ತದನಂತರ, ಈ ನ್ಯಾಯಾಲಯದ ಮುಂದೆ ದಿವಾಣಿ ಮೇಲ್ಮನವಿ 531/2008 ರಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ಮೇಲ್ಮನವಿದಾರರು, ಕಲೆಕ್ಟರ್ ವರ್ಸಸ್ ಪಂಚಮುಖಿ ಎಂಜಿನಿಯರಿಂಗ್ ವರ್ಕ್ಸ್ {2003(158)ಇ ಎಲ್ ಟಿ 550(ಎಸ್.ಸಿ)} ನಲ್ಲಿನ ನಿರ್ಧಾರವನ್ನು ಅನುಸರಿಸಬೇಕು ಎಂದು ವಾದಿಸಿದರು. ಹೀಗಾಗಿ, ಧರ್ಮದಾ ವು ಮೌಲ್ಯಮಾಪನದ ಒಂದು ಭಾಗವಾಗಿರಬೇಕು ಎಂದು ವಾದಿಸುತ್ತಾರೆ.

5. ಪ್ರಸ್ತುತ ಪ್ರಕರಣವನ್ನು ಮೆಸರ್ಸ್. ಡಿ. ಜೆ. ಮಲ್ಪಾನಿ ವರ್ಸಸ್ ಕೇಂದ್ರ ಅಬಕಾರಿ ಆಯುಕ್ತರು, ನಾಸಿಕ್ ಪ್ರಕರಣದೊಂದಿಗೆ ಜೋಡಿಸಲಾಗಿದ್ದು , ಮೌಲ್ಯಮಾಪನದ ಉದ್ದೇಶಗಳಿಗಾಗಿ ವಹಿವಾಟಿನ ಮೌಲ್ಯದಲ್ಲಿ ಧರ್ಮದಾ ಮೊತ್ತವನ್ನು ಸೇರಿಸಲಾಗುವುದಿಲ್ಲ ಎಂದು ಅದರಲ್ಲಿ ನಾವು ನಿರ್ಣಯಿಸಿದ್ದೇವೆ.

6. ಮೆಸರ್ಸ್. ಡಿ. ಜೆ. ಮಲ್ಪಾನಿ ವಿರುದ್ಧ ಕಮೀಷನರ್ ಆಫ್ ಸೆಂಟ್ರಲ್ ಎಕ್ಸೈಸ್, ನಾಸಿಕ್ ಸಿವಿಲ್ ಮೇಲ್ಮನವಿ ಸಂಖ್ಯೆ 5282/2005ರ ತೀರ್ಪನ್ನು ದೃಷ್ಟಿಯಲ್ಲಿಟ್ಟುಕೊಂಡು, ಪ್ರಸ್ತುತ ಮೇಲ್ಮನವಿಯನ್ನು ವಜಾಗೊಳಿಸಲಾಗಿದೆ.

ಮೇಲ್ಮನವಿಯನ್ನು ವಜಾಗೊಳಿಸಲಾಗಿದೆ.